ಅವರೊಬ್ಬರು ತಮ್ಮ ಪೋಷಕರನ್ನು ಕರೆದುಕೊಂಡು ಆಸ್ಪತ್ರೆಗೆ ಬೆಂಗಳೂರಿಗೆ ಬಂದು ಹೋಗಲಿಕ್ಕೆ ಅನುಕೂಲವಾಗುತ್ತದೆ. ಆ ಹಿನ್ನೆಲೆಯಲ್ಲಿ ಸ್ವಲ್ಪ ಸರಳೀಕರಣ ಮಾಡಬಹುದೇ ಎನ್ನುವ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಎಲ್ಲಾ ವಿಚಾರವನ್ನು ಹೇಳಿದ್ದೇನೆ. ವಾಜಪೇಯಿ ಆರೋಗ್ಯ ಶ್ರೀ ಯೋಜನೆಯಲ್ಲಿ ನೀವು ಹೇಳಿರತಕ್ಕಂಥ ಸಂಗತಿಗಳಿವೆ. ಈಗಾಗಲೇ ಅದು ಸರಳೀಕರಣಗೊಂಡಿದೆ. ಇನ್ನು ಏನಾದರೂ ಸಮಸ್ಯೆ ಇದ್ದರೆ ದಯವಿಟ್ಟು ನಮ್ಮ ಗಮನಕ್ಕೆ ತಂದರೆ ಅವರಿಗೆ ಯಾವುದೇ ರೀತಿಯ ತೊಂದರೆ ಆಗದ ರೀತಿಯಲ್ಲಿ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಎಂಡೋಸಲ್ಫಾನ್ ಪೀಡಿತರ ಪುನರ್ವಸತಿ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 12 (19)

ಶ್ರೀ ರವಿಸುಬ್ರಮಣ್ಯ ಎಲ್.ಎ. (ಬಸವನಗುಡಿ)

ಅ) ರಾಜ್ಯದಲ್ಲಿರುವ ಎಂಡೋಸಲ್ಫಾನ್ ಪೀಡಿತರ ಸಮೀಕ್ಷೆಯು ಯಾವ ಹಂತದಲ್ಲಿದೆ; ಸಮೀಕ್ಷೆಯ ಪ್ರಕಾರ ಎಂಡೋಸಲ್ಫಾನ್ ಪೀಡಿತರ ಸಂಖ್ಯೆ ಎಷ್ಟು;

ಆ) ಎಂಡೋಸಲ್ಫಾನ್ ಪೀಡಿತರಲ್ಲಿ 0–10 ವರ್ಷ 10–20 ವರ್ಷ 20–30 ವರ್ಷ ಹಾಗೂ 30 ವರ್ಷಕ್ಕಿಂತ ಮೇಲ್ಪಟ್ಟವರೆಷ್ಟು; (ವಿವರಗಳನ್ನು ನೀಡುವುದು) ಪೀಡಿತರಲ್ಲಿ ಗಂಡು ಹಾಗೂ ಹೆಂಗಸರ ಸಂಖ್ಯೆಯನ್ನು ತಿಳಿಸುವುದು.

ಇ) ಎಂಡೋಸಲ್ಫಾನ್ ಪೀಡಿತರ ಪ್ರದೇಶದಲ್ಲಿ ಹಾಲಿ ಎಷ್ಟು ಸರ್ಕಾರಿ ಆಸ್ಪತ್ರೆಗಳಿವೆ; ಪೀಡಿತರ ಅನುಕೂಲಕ್ಕಾಗಿ ಹೆಚ್ಚುವರಿ ಆಸ್ಪತ್ರೆಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಸಂಪೂರ್ಣ ವಿವರ ನೀಡುವುದು)

ಹಾಲಿ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯಕೀಯ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಈ) ಎಂಡೋಸಲ್ಫಾನ್ ಪೀಡಿತರ ಪುನರ್ವಸತಿಗಾಗಿ ಸರ್ಕಾರವು ಕೈಗೊಂಡಿರುವ ವಿಶೇಷ ಕಾರ್ಯಕ್ರಮಗಳೇನು;

ಉ) ಎಂಡೋಸಲ್ಫಾನ್ ಪೀಡಿತರಿಗಾಗಿ ಪ್ರಸ್ತುತ ಬಜೆಟ್‌ನಲ್ಲಿ ವಿಶೇಷ ಪ್ಯಾಕೇಜ್ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಸಮೀಕ್ಷೆಯು ಮುಗಿದಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆಯು ನಡೆಯುತ್ತಿದೆ.

ಸಮೀಕ್ಷೆಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1907 ಮತ್ತು ಉಡುಪಿ ಜಿಲ್ಲೆಯಲ್ಲಿ 1703 ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆಯ ಅಂದಾಜಿನ ಪ್ರಕಾರ 383 ಎಂಡೋಸಲ್ಫಾನ್ ಪೀಡಿತರ ಸಂಖ್ಯೆಯಾಗಿರುತ್ತದೆ.

ಆ) ದಕ್ಷಿಣ ಕನ್ನಡ

0–10	10–20	20–30	30 ವರ್ಷಕ್ಕಿಂತ ಮೇಲ್ಪಟ್ಟವರು	ಒಟ್ಟು	ಗಂಡು	ಹೆಣ್ಣು
244	358	431	874	1907	894	1013

ಉಡುಪಿ

0–10	10–20	20–30	30 ವರ್ಷಕ್ಕಿಂತ ಮೇಲ್ಪಟ್ಟವರು	ಒಟ್ಟು	ಗಂಡು	ಹೆಣ್ಣು
150	272	435	846	1703	844	859

ಉತ್ತರ ಕನ್ನಡ

0–10	10–20	20–30	30 ವರ್ಷಕ್ಕಿಂತ ಮೇಲ್ಪಟ್ಟವರು	ಒಟ್ಟು	ಗಂಡು	ಹೆಣ್ಣು
21	65	133	164	383	201	182

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಡೋಸಲ್ಫಾನ್ ಪೀಡಿತರ ಪ್ರದೇಶದಲ್ಲಿ ಹಾಲಿ 19 ಸರ್ಕಾರಿ ಆಸ್ಪತ್ರೆಗಳಿವೆ. ಸರ್ಕಾರದ ಆದೇಶ ಸಂಖ್ಯೆ: ಆಕುಕ 511 ಸಿಜಿಎಂ 2012, ಬೆಂಗಳೂರು, ದಿನಾಂಕ: 26–12–2012ರಂತೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಕೊಕ್ಕಡ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಮಂಜೂರಾತಿಯನ್ನು ನೀಡಿದೆ. ಹಾಲಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಕೀಯ ಸಿಬ್ಬಂದಿಗಳ ಸಂಖ್ಯೆ–309

- ಉಡುಪಿ ಜಿಲ್ಲೆಯ ಎಂಡೋಸಲ್ಫಾನ್ ಪೀಡಿತ ಪ್ರದೇಶದಲ್ಲಿ 29 ಸರ್ಕಾರಿ ಆಸ್ಪತ್ರೆಗಳುಇದೆ. ಉಡುಪಿ ಜಿಲ್ಲೆಯ ಎಂಡೋಸಲ್ಫಾನ್ ಪೀಡಿತ ಪ್ರದೇಶಗಳ ಹಾಲಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಕೀಯ ಸಿಬ್ಬಂದಿಗಳ ಸಂಖ್ಯೆ: 261
- ಉತ್ತರ ಕನ್ನಡ ಜಿಲ್ಲೆಯಲ್ಲಿ ಎಂಡೋಸಲ್ಫಾನ್ ಪೀಡಿತ ಪ್ರದೇಶಗಳಲ್ಲಿ 2 ಸರ್ಕಾರಿ ಆಸ್ಪತ್ರೆಗಳಿರುತ್ತವೆ. ಸದರಿ ಜಿಲ್ಲೆಗೆ ಹೆಚ್ಚುವರಿ ಆಸ್ಪತ್ರೆಗಳನ್ನು ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ. ಉತ್ತರ ಕನ್ನಡ ಜಿಲ್ಲೆಯ ಎಂಡೋಸಲ್ಫಾನ್ ಪೀಡಿತ ಪ್ರದೇಶಗಳ ಹಾಲಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಕೀಯ ಸಿಬ್ಬಂದಿಗಳ ಸಂಖ್ಯೆ–36.

ಈ) ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನಾ ಹಾಗೂ ಸರಕಾರದ ಒಡಂಬಡಿಕೆಯಿಂದ ಕೊಕ್ಕಡ ಮತ್ತು ಅಲಂಕಾರುಗಳಲ್ಲಿ 2 Day-Care-Centre ನ್ನು ಪ್ರಾರಂಭಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಎಂಡೋಸಲ್ಫಾನ್ ವಿಶೇಷ ತಜ್ಞ ವೈದ್ಯರುಗಳಿಂದ ದಿನಾಂಕ: 5, 6, 7 ಮತ್ತು 8ನೇ ಡಿಸೆಂಬರ್ 2012 ರಂದುಪುತ್ತೂರು, ಬೆಳ್ತಂಗಡಿ, ಸುಳ್ಯ ಮತ್ತು ಬಂಟ್ವಾಳ ತಾಲ್ಲೂಕುಗಳಲ್ಲಿ 11 ಶಿಬಿರಗಳನ್ನು ನಡೆಸಲಾಗಿರುತ್ತದೆ. ಈ ಶಿಬಿರಗಳಲ್ಲಿ 4986 ಮಂದಿ ಹಾಜರಾಗಿದ್ದರು ಹಾಗೂ ಎಂಡೋಸಲ್ಫಾನ್ ಸಿಂಪಡಣೆಯ ಪ್ರದೇಶಗಳಲ್ಲಿ 1907 ಜನರಲ್ಲಿ ಅಂಗವಿಕಲತೆ, ಬುದ್ಧಿಮಾಂದ್ಯತೆ ಇತ್ಯಾದಿ ರೋಗಲಕ್ಷಣಗಳು ಕಂಡು ಬಂದಿದೆ.

- ಉಡುಪಿ ಜಿಲ್ಲೆಯ 3 ತಾಲ್ಲೂಕುಗಳಲ್ಲಿ ಎಂಡೋಸಲ್ಫಾನ್ ಸಿಂಪಡಣೆಯ ದುಷ್ಪರಿಣಾಮದಿಂದ ಉಂಟಾಗಿರುವ ವಿಕಲಚೇತನರ ಸಮೀಕ್ಷೆಯನ್ನು ಡಿಸೆಂಬರ್ 2012ರಲ್ಲಿ ಒಟ್ಟು 73 ಗ್ರಾಮಗಳಲ್ಲಿ ನಡೆಸಲಾಗಿರುತ್ತದೆ. ಈ 73 ಗ್ರಾಮಗಳಲ್ಲಿ ಸಮೀಕ್ಷೆ ಸಮಯದಲ್ಲಿ ಒಟ್ಟು 1612 ಎಂಡೋಸಲ್ಫಾನ್ ಸಿಂಪಡಣೆಯ ದುಷ್ಪರಿಣಾಮದಿಂದ ವಿಕಲಚೇತನ ಉಂಟಾಗಿರುವುದು ವರದಿಯಾಗಿರುತ್ತದೆ. ಎಂಡೋಸಲ್ಫಾನ್ ಸಿಂಪಡಣೆಯಿಂದಾದ ವಿಕಲಚೇತನರಿಗೆ ಅಗತ್ಯ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ವಿತರಿಸಲಾಗುವುದು ಹಾಗೂ ಅಂತಹ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಆಧರಿಸಿ ಅವರುಗಳಿಗೆ ಕಂದಾಯ ಇಲಾಖೆಯ ವತಿಯಿಂದ ಸೂಕ್ತ ಪರಿಹಾರ ಒದಗಿಸಲಾಗುವುದು.

ಉ) ಎಂಡೋಸಲ್ಫಾನ್ ಪೀಡಿತರ ಪುನರ್ವಸತಿಗಾಗಿ ವಿಶೇಷ ಪ್ಯಾಕೇಜುಗಳನ್ನು ಸಿದ್ಧಪಡಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಲ್. ಎ. ರವಿಸುಬ್ರಹ್ಮಣ್ಯ:– ಮಾನ್ಯ ಅಧ್ಯಕ್ಷರೆ ಉತ್ತರವನ್ನು ಒದಗಿಸಿದ್ದಾರೆ. ಇವತ್ತು ಸರ್ಕಾರ ಹೇಳಿರತಕ್ಕಂಥ ರೀತಿಯಲ್ಲಿಯೇ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸುಮಾರು4 ಸಾವಿರಕ್ಕಿಂತ ಹೆಚ್ಚು ಜನರು ಎಂಡೋಸಲ್ಫಾನ್ ಪೀಡಿತಕ್ಕೆ ಒಳಗಾಗಿದ್ದಾರೆಂದು ಮಾಹಿತಿ ಕೊಟ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನಾ ಮತ್ತು ಕರ್ನಾಟಕ ಸರ್ಕಾರದ ಒಡಂಬಡಿಕೆಯಿಂದ ಎರಡು Day-Care-Center ಪುನರ್ವಸತಿ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದೇವೆಂದು ಹೇಳಿದ್ದೀರಿ. ಈ ಒಂದು ಗಂಭೀರವಾದಂಥ ವ್ಯಾಧಿಯಿಂದ ನರಳುತ್ತಿರುವ ಸಾವಿರಾರು ಜನರಿಗೆ ಕೇವಲ ಎರಡು Day-Care-Center ಗಳನ್ನು ಮಾಡಿದರೆ ಖಂಡಿತ ಸಾಕಾಗುವುದಿಲ್ಲ. ಅದೇ ರೀತಿಯಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಇವರಿಗೆ ಪ್ರಮಾಣ ಪತ್ರವನ್ನು ಕೊಡುತ್ತೇವೆ ಹಾಗೆಯೇ ಇದಕ್ಕೆ ಕಂದಾಯ ಇಲಾಖೆ ಪರಿಹಾರವನ್ನು ನೀಡುತ್ತದೆ ಎಂಬ ಮಾತನ್ನೂ ಸಹ ಹೇಳಿದ್ದಾರೆ. ಆದರೆ, ಈ ಬಗ್ಗೆ ಇದರಲ್ಲಿ ಯಾವುದೇ ಒಂದು ಸ್ಪಷ್ಟೀಕರಣ ಕೊಟ್ಟಿಲ್ಲ. ಅಂದರೆ, ಅವರಿಗೋಸ್ಕರ ಒಂದು ಯೋಜನೆಗಳನ್ನು ಹಾಕಿಕೊಂಡಿದ್ದು, ಮುಂದಿನ ದಿನಗಳಲ್ಲಿ ಆ ಯೋಜನೆಗಳ ಬಗ್ಗೆ ನಮ್ಮ ಸರ್ಕಾರ ಪರಿಶೀಲನೆ ಮಾಡುತ್ತದೆಂದು ಹೇಳಿದ್ದಾರೆ. ಆದರೆ, ಅವರಿಗೆ ಯಾವ ರೀತಿಯಾದ ಪ್ಯಾಕೇಜ್ ಅನ್ನು ಕೊಡುತ್ತೇವೆಂಬ ಬಗ್ಗೆ ಮತ್ತು ಇತರೇ ಗಂಭಿರವಾದಂಥ ಯಾವುದೇ ವಿಚಾರಗಳನ್ನು ಅವರು ತಿಳಿಸಿಲ್ಲ. ತಮಗೆ ತಿಳಿದಿರುವ ಮಟ್ಟಿಗೆ 2011 ರಲ್ಲಿ ಇದರ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ನಿರ್ಣಯ ತೆಗೆದುಕೊಂಡು ಅಂತರರಾಷ್ಟ್ರೀಯ ಮಟ್ಟದಲ್ಲಿ ಎಂಡೋಸಲ್ಫಾನ್ ಅನ್ನು ಬ್ಯಾನ್ ಮಾಡಿರುವ ಹಿನ್ನೆಲೆಯಲ್ಲಿ ನಮ್ಮ ಸುಪ್ರೀಂ ಕೋರ್ಟ್ ಕೂಡ 2001 ರಲ್ಲಿಯೇ ಇದನ್ನು ಬ್ಯಾನ್ ಮಾಡುವುದಕ್ಕೆ ಆದೇಶ ಮಾಡಿದೆ. ನಮ್ಮ ರಾಜ್ಯದಲ್ಲೂ ಕೂಡ ಇದನ್ನು ಬ್ಯಾನ್ ಮಾಡಿರುವುದಕ್ಕೆ ನಮ್ಮ ಕರ್ನಾಟಕ ರಾಜ್ಯ ಸರ್ಕಾರವನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಆದರೆ, ಈ ಒಂದು ವ್ಯಾಧಿಯಿಂದ ಬಳಲುತ್ತಿರುವ ಹೆಣ್ಣುಮಕ್ಕಳಲ್ಲಿ ಗರ್ಭಪಾತ ಆಗುತ್ತಿವೆ.

ಅಧ್ಯಕ್ಷರು:– ಮಾನ್ಯ ಸಚಿವರು ಉತ್ತರ ಹೇಳಲಿ. ಅನಂತರ ತಾವು ಕೇಳಿ.

ಶ್ರೀಎಲ್.ಎ.ರವಿಸುಬ್ರಮಣ್ಯ:–ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದಂಥ ವಿಷಯವಾಗಿದೆ. ಈ ಬಗ್ಗೆ ಮಾತನಾಡುವುದಕ್ಕೆ ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:– ನೀವು ಪ್ರಶ್ನೆಯನ್ನು ಕೇಳುತ್ತಿಲ್ಲ.

ಶ್ರೀ ಎಲ್. ಎ. ರವಿಸುಬ್ರಮಣ್ಯ:– ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು:– ಇದು ಹೇಗೆ ಪ್ರಶ್ನೆ ಅಗುತ್ತದೆ? ಮಾನ್ಯ ಸಚಿವರು ಉತ್ತರ ಹೇಳಿದ ಮೇಲೆ ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಲ್.ಎ. ರವಿಸುಬ್ರಮಣ್ಯ:– ಈ ರೀತಿಯಾದಂಥ ಒಂದು ಸಂದರ್ಭದಲ್ಲಿ ಇದರ ಬಗ್ಗೆ ಸರ್ಕಾರ ಒಂದು ವಿಶೇಷವಾದಂಥ ಒತ್ತನ್ನು ಕೊಡಬೇಕಾಗುತ್ತದೆ. ತಮ್ಮ ಮುಖಾಂತರ ಈ ಸಂದರ್ಭದಲ್ಲಿ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಈ ಮಕ್ಕಳ ತಂದೆಯಂದಿರು.....

ಅಧ್ಯಕ್ಷರು:– ಇದು ಪ್ರಶ್ನೆ ಆಗುವುದಿಲ್ಲ. ಮಾನ್ಯ ಸಚಿವರು ಉತ್ತರ ಹೇಳಿದ ಮೇಲೆ ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಅರವಿಂದ ಲಿಂಬಾವಳಿ:– (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ರವಿಸುಬ್ರಮಣ್ಯರವರು ಎಂಡೋಸಲ್ಫಾನ್ ವಿಚಾರವಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈ ಸಮಸ್ಯೆ ಇದೆ. ನಾನೂ ಕೂಡ ಕೊಕ್ಕಡ ಎಂಬ ಗ್ರಾಮಕ್ಕೆ ಭೇಟಿ ಕೊಟ್ಟಿದ್ದೆ. ಆ ಗ್ರಾಮದ ಪರಿಸ್ಥಿತಿಯನ್ನು ಅವಲೋಕಿಸಿದ ಮೇಲೆ ಇನ್ನೊಂದು Day-Care-Centre ಮಾಡಬೇಕೆಂದು ಬೇಡಿಕೆ ಬಂತು. ಆನಂತರ ಅಲ್ಲಿನ ಉಸ್ತುವಾರಿ ಸಚಿವರ ಜೊತೆ ಚರ್ಚೆ ಮಾಡಿ ಇನ್ನೊಂದು Day-Care-Centre ಅನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದೇವೆ. ಉಡುಪಿ ಜಿಲ್ಲೆಯಲ್ಲಿನ ಸರ್ವೆ ಕಾರ್ಯ ಇತ್ತೀಚೆಗೆ ಸಂಪೂರ್ಣಗೊಂಡಿದೆ. ಅಲ್ಲಿನ

ಸರ್ವೆಯ ಆಧಾರದ ಮೇಲೆಯೇ ನಾನು ಇಲ್ಲಿ ಅಂಕಿ–ಅಂಶಗಳನ್ನು ಕೊಟ್ಟಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1907, ಉಡುಪಿ ಜಿಲ್ಲೆಯಲ್ಲಿ 1703 ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ 383 ಜನರು ಎಂಡೋಸಲ್ಫಾನ್ ಪೀಡಿತರಾಗಿದ್ದಾರೆ. ಅಲ್ಲಿ Day-Care-Centre ಮಾಡಿರುವುದಲ್ಲದೆ ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅಲ್ಲಿವೆ. ಇದನ್ನು ಹೊರತು ಪಡಿಸಿ ಕೊಕ್ಕಡ ಗ್ರಾಮಕ್ಕೆ ನಾನು ಭೇಟಿ ಮಾಡಿ ಬಂದ ನಂತರ ಅಲ್ಲಿರುವ ಪಿಹೆಚ್‌ಸಿ ಆಸ್ಪತ್ರೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಅದನ್ನು ಸಿಹೆಚ್‌ಸಿ ಆಗಿ ಅಂದರೆ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿ 30 ಹಾಸಿಗೆಯ ಆಸ್ಪತ್ರೆಯನ್ನು ಮಾಡಿದ್ದೇವೆ. ಹಾಗೆಯೇ, ಅಲ್ಲಿನ ಜನರ ಆರೋಗ್ಯದ ಹಿನ್ನೆಲೆಯಲ್ಲಿ ಇದಕ್ಕಾಗಿ ವಿಶೇಷವಾದಂಥ ಶಿಬಿರಗಳನ್ನು ಸಹ conduct ಮಾಡಿದ್ದೇವೆ. ಅಲ್ಲಿ ಎಂಡೋಸಲ್ಫಾನ್‌ನಿಂದ ತೊಂದರೆಯಾಗಿರುವವರಿಗೆ ಬೇಕಾಗಿರುವಂಥ ಔಷಧಿ ಮತ್ತು ಇತರೇ ಎಲ್ಲ ಸೌಲಭ್ಯವನ್ನು ಒದಗಿಸುತ್ತಿದ್ದೇವೆ. ಹಾಗೆಯೇ ವಿಶೇಷವಾಗಿ ಎರಡು ಆಂಬ್ಯುಲೆನ್ಸ್ ಕೂಡ ಅಲ್ಲಿ ಕೇಂದ್ರೀಕೃತ ಮಾಡಿದ್ದೇವೆ. ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಮಾಹಿತಿ ಇನ್ನೂ ಸ್ವಲ್ಪ ಬರಬೇಕಾಗಿದೆ. ಈ ಎಲ್ಲ ಮಾಹಿತಿ ಬಂದ ನಂತರ ಈ ಎರಡು ಜಿಲ್ಲೆಗಳಲ್ಲಿ ಇದೇ ರೀತಿಯಾದ ಕ್ರಮವನ್ನು ಜರುಗಿಸುತ್ತೇವೆ. ಹಾಗೆಯೇ ಕಂದಾಯ ಇಲಾಖೆಗೆ ಸಂಬಂಧಪಟ್ಟಂಥ ಪ್ಯಾಕೇಜ್ ಅನ್ನು ನಮ್ಮ ವರದಿ ಆಧಾರದ ಮೇಲೆ ಅವರು ಕೊಡುತ್ತಾರೆ. ಕಂದಾಯ ಇಲಾಖೆಗೆ ಈ ಪ್ರಶ್ನೆಯನ್ನು ಹಾಕಿದ್ದೇವೆ. ಏಕೆಂದರೆ, ಅವರು ಆರೋಗ್ಯದ ಬಗ್ಗೆ ಕೇಳಿರುವುದರಿಂದ ಆರೋಗ್ಯದ ಹಿನ್ನೆಲೆಯಲ್ಲಿ ಏನೇನು ಆಗಿದೆ ಎಂಬ ವಿಚಾರವನ್ನು ಈ ಸಂದರ್ಭದಲ್ಲಿ ತಿಳಿಸುವಂಥ ಪ್ರಯತ್ನ ಮಾಡಿದ್ದೇನೆ. ಈ ಒಂದು ಕಾಯಿಲೆಯಿಂದ ಅಂಗವಿಕಲ ಆದಾಗ ಸಹಜವಾಗಿ ಅವರಿಗೆ ಕೇರಳ ರಾಜ್ಯದ ಮಾದರಿಯಲ್ಲಿ ಪ್ಯಾಕೇಜ್ ಕೊಡಬೇಕೆಂಬ ಬೇಡಿಕೆ ಇರುತ್ತದೆ. ಕೇರಳ ರಾಜ್ಯದ ಮಾದರಿಗಿಂಥ ಇನ್ನೂ ಒಳ್ಳೆಯ ಪ್ಯಾಕೇಜ್ ಕೊಡುವಂಥ ಮಟ್ಟಕ್ಕೆ ನಮ್ಮ ಸರ್ಕಾರ ಇದೆ. ಎಂಡೋಸಲ್ಫಾನ್‌ನಿಂದ ಯಾರು

ಅಂಗವಿಕಲರಾಗಿದ್ದಾರೆಯೋ ಅವರಿಗೆ ಪ್ರತಿ ತಿಂಗಳು ಮಾಸಾಶನ ಕೂಡ ಕೊಡಲಾಗುತ್ತಿದೆ. ಹಾಗೆಯೇ ಒಂದು ಟೈಂ ಪ್ಯಾಕೇಜ್ ಅನ್ನು ಕಂದಾಯ ಇಲಾಖೆ ಮೂಲಕ ಕೊಡಲಾಗಿದೆ. ಆದ್ದರಿಂದ, ಇದರಲ್ಲಿ ಯಾವುದೇ ರೀತಿಯ ತಾರತಮ್ಮ ಮಾಡತಕ್ಕಂಥ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡೋದಿಲ್ಲ. ಎಂಡೋಸಲ್ಫಾನ್ ಉಪಯೋಗ ಮಾಡಿರುವಂಥ ಪರಿಣಾಮದಿಂದಾಗಿ ಆಗಿರುವಂಥ ಆರೋಗ್ಯ ಸಮಸ್ಯೆಗಳು ಏನಿವೆ ಅದನ್ನು ಬಹಳ effective ಆಗಿ ನಾವು ಎದುರಿಸುತ್ತಿದ್ದೆವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಲ್.ಎ. ರವಿಸುಬ್ರಮಣ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಮಾನ್ಯ ಸಚಿವರ ಗಮನಕ್ಕೆ ಕೆಲವು ವಿಚಾರಗಳನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರ ಮತ್ತೆ ಒಂದುRevision Petition ಅನ್ನು ಸುಪ್ರೀಂ ಕೋರ್ಟ್ ಮುಂದೆ ತಂದು ಬ್ಯಾನ್ ಮಾಡಿರುವ ಎಂಡೋಸಲ್ಫಾನ್ ಅನ್ನು reconsider ಮಾಡಬೇಕೆಂದು ಕೇಳಿದ್ದಾರೆ. ಮತ್ತೆ ಎಂಡೋಸಲ್ಫಾನ್‌ಗೆ ಯಾವುದೇ ಕಾರಣಕ್ಕೂ ಸಹ ಕರ್ನಾಟಕ ಸರ್ಕಾರ ಅವಕಾಶವನ್ನು ಕೊಡಬಾರದು. ಕೇಂದ್ರ ಸರ್ಕಾರದ ಸಹಕಾರ ಕೂಡ ನಮಗೆ ಬೇಕು ಅದನ್ನು ನಮಗೆ ಕೊಡಿ ಎಂದು ಕೇರಳ ರಾಜ್ಯದವರು ಒಂದು ಬೇಡಿಕೆಯನ್ನು ಕೇಂದ್ರ ಸರ್ಕಾರದ ಮುಂದಿಟ್ಟಿದ್ದಾರೆ. ಆದ್ದರಿಂದ, ಅದೇ ರೀತಿಯಲ್ಲಿ ನಮ್ಮ ರಾಜ್ಯ ಸರ್ಕಾರ ಕೂಡ ಕೇಂದ್ರ ಸರ್ಕಾರದ ಸಹಕಾರವನ್ನು ಅಪೇಕ್ಷಿಪಟ್ಟು ಕನಿಷ್ಠಪಕ್ಷ ಇದರಿಂದ ನರಳುತ್ತಿರುವ ರೋಗಿಗಳಿಗೆ ತಿಂಗಳಿಗೆ ಮೂರು ಸಾವಿರ ರೂಪಾಯಿ ಮಾಸಾಶನ ಕೊಟ್ಟರೆ ಅವರ ಜೀವನ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ. ಹಾಗೆಯೇ, ಇವತ್ತಿನದಿವಸ ಇನ್ನೂ ಹೆಚ್ಚಿನ ಪುನರ್ವಸತಿ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕಾಗಿದೆ. ಹಾಗೆಯೇ, ಎಂಡೋಸಲ್ಫಾನ್ ಏರಿಯಾವನ್ನು ಸಾವಯವ ಪ್ರದೇಶ ಎಂದು ಗುರುತಿಸಿ ಮುಂದಿನ ದಿನಗಳಲ್ಲಿ ಈ ಜಾಗದಲ್ಲಿ ಯಾವುದೇ ಇಂಥ ಮಾರಕ ಪೆಸ್ಟಿಸೈಡ್‌ಗಳನ್ನು ಉಪಯೋಗಿಸತಕ್ಕಂಥದನ್ನು ತಡೆಹಿಡಿಯಬೇಕು. ಇವತ್ತಿನದಿವಸ ಬೇರೆ ಬೇರೆ

ರಾಜ್ಯಗಳಲ್ಲಿ ಟೊಮೋಟೊ ಮತ್ತು ಆಲೂಗಡ್ಡೆ ಬೆಳೆಗೆ ಇದನ್ನು ಸ್ಪ್ರೇ ಮಾಡುತ್ತಿದ್ದಾರೆ. ಇದನ್ನು ಬ್ಯಾನ್ ಮಾಡಿದ್ದರೂ ಕೂಡ ಕೆಲವು ಕಡೆ ಸಿಗುತ್ತಿದೆ. ಆದ್ದರಿಂದ, ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಜೆ.ಡಿ.ನಾಯಕ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಒದಗಿಸಿರುವ ಉತ್ತರವನ್ನು ನಾನು ನೋಡಿದ್ದೇನೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಇನ್ನೂ ಪೂರ್ಣವಾಗಿ ಸರ್ವೆ ಆಗಿಲ್ಲ. ಸರ್ವೆ ಮಾಡತಕ್ಕಂಥದು ಇನ್ನೂ ಸಾಕಷ್ಟು ಬಾಕಿ ಇದೆ. ಈಗ ಪರಿಹಾರ ಕೊಡುತ್ತಿದ್ದೀರಿ. ಆದರೆ, ಈ ಪರಿಹಾರ ಕೇರಳ ರಾಜ್ಯದ ಮಾದರಿಯಲ್ಲಿರಬೇಕೆಂಬುದು ಜನರ ಬೇಡಿಕೆಯಾಗಿದೆ. ಎಂಡೋಸಲ್ಫಾನ್ ಪೀಡಿತರಿಗೆ ಕೇರಳ ರಾಜ್ಯದಲ್ಲಿ ಒಳ್ಳೆಯ ಪರಿಹಾರವನ್ನು ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಕರಾವಳಿ ಭಾಗದಲ್ಲಿ ಎಂಡೋಸಲ್ಫಾನ್‌ನಿಂದ ಪೀಡಿತರಾಗಿರುವವರಿಗೆ ಕೇರಳ ರಾಜ್ಯದ ಮಾದರಿಯಲ್ಲಿಯೇ ಪರಿಹಾರ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ ಮತ್ತು ಕೃಷಿ ಇಲಾಖೆಯ ಜಂಟಿ ಸಭೆ ಈಗಾಗಲೇ ಆಗಿದೆ. ಎಂಡೋಸಲ್ಫಾನ್ ಅನ್ನು ಮುಂದಿನ ದಿನಗಳಲ್ಲಿ ಉಪಯೋಗಿಸಬಾರದೆಂದು ಮಾನ್ಯ ಸದಸ್ಯರಾದ ಶ್ರೀ ರವಿಸುಬ್ರಮಣ್ಯರವರ ಏನೊಂದು concern ಇದೆಯೋ ಅದೇ ರೀತಿಯಲ್ಲಿ ಬರುವ ದಿನಗಳಲ್ಲಿ ಯಾವುದೇ ಕಾರಣಕ್ಕೂ ಎಂಡೋಸಲ್ಫಾನ್ ಉಪಯೋಗಿಸಬಾರದೆಂಬ ವಾದ ಕೂಡ ಸುಪ್ರೀಂ ಕೋರ್ಟ್ ಮುಂದೆ ನಮ್ಮ ಸರ್ಕಾರದ್ದು ಆಗಿದೆ. ಈ ಹಿನ್ನೆಲೆಯಲ್ಲಿ ಎಲ್ಲ ತಯಾರಿಯನ್ನು ನಮ್ಮ ಸರ್ಕಾರ ಮಾಡಿದೆ. ಹಾಗೆಯೇ ಜಂಟಿಯಾಗಿ ಇದರ ಮೇಲೆ ಅಧ್ಯಯನ ಕೂಡ ಮಾಡುತ್ತಿದ್ದೇವೆ. ಇದರ ಸಂಪೂರ್ಣ ವರದಿ ಬಂದ ತಕ್ಷಣ ಸುಪ್ರೀಂ ಕೋರ್ಟ್‌ಗೂ ಕೂಡ ಅದನ್ನು ಸಲ್ಲಿಸುವಂಥ ಒಂದು ಕೆಲಸವನ್ನು ಮಾಡಲಾಗುತ್ತದೆ. ಬೇರೆ ಕಡೆಗೆ Day-Care-Centre ಗಳನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ.

ನಾನು ಈಗಾಗಲೇ ಹೇಳಿದ ಹಾಗೆ ಸಮೀಕ್ಷೆ ಕೆಲಸ ಪೂರ್ಣಗೊಂಡ ನಂತರ ಬೇರೆ ಕಡೆ ಇದನ್ನು ಮಾಡುವಂಥ ಅವಶ್ಯಕತೆ ಇದ್ದರೆ ಖಂಡಿತ ಮಾಡಲಾಗುತ್ತದೆ. ಇನ್ನೊಬ್ಬ ಮಾನ್ಯ ಸದಸ್ಯರು ಈಗಾಗಲೇ ಹೇಳಿದ ಹಾಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಎಂಡೋಸಲ್ಫಾನ್ ಬಗ್ಗೆ ಸಂಪೂರ್ಣವಾಗಿ ಸರ್ವೆ ಮಾಡಬೇಕೆಂದು ನಾನು ಈಗಾಗಲೇ ಹಿಂದಿನ ಸಭೆಯಲ್ಲಿ ನಿರ್ದೇಶನ ನೀಡಿದ್ದೇನೆ. ಕೇವಲ ಮೂರು ಗ್ರಾಮಗಳಲ್ಲಿ ಮಾತ್ರ affect ಆಗಿದೆ ಎಂದು ಅಧಿಕಾರಿಗಳು ಮಾಹಿತಿ ತಂದಿದ್ದರು. ಸಂಪೂರ್ಣ ಸರ್ವೆ ಮಾಡಿ ಎಲ್ಲೆಲ್ಲಿ ಇದರ affect ಆಗಿದೆ ಎಂಬ ಸಂಪೂರ್ಣ ಮಾಹಿತಿಯನ್ನು ಒದಗಿಸಿ ಎಂದು ನಾನು ಈಗಾಗಲೇ ನಿರ್ದೇಶನ ಕೊಟ್ಟಿದ್ದೇನೆ. ಕೇರಳ ರಾಜ್ಯದ ಪ್ಯಾಕೇಜ್ ನಮಗೆ ಮಾದರಿಯಲ್ಲ. ಕೇರಳ ರಾಜ್ಯದಲ್ಲಿ One-time package ಮಾತ್ರ ಕೊಟ್ಟಿದ್ದಾರೆ. ಅದರಿಂದ ತೊಂದರೆಯಾಗುತ್ತದೆ. ಇದರ ಬಗ್ಗೆ ಕಂದಾಯ ಇಲಾಖೆ ಜೊತೆ ಚರ್ಚೆ ಮಾಡುತ್ತಿದ್ದೇವೆ. ಸಂಪೂರ್ಣ ವರದಿ ಬಂದ ನಂತರ ಕೇರಳ ಮಾದರಿಯಲ್ಲಿರುವ ಒಳ್ಳೆಯ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ರಾಜ್ಯದಲ್ಲಿಯೂ ಸಹ ಕೊಟ್ಟು ಕೇರಳದವರು ಕರ್ನಾಟಕ ಮಾದರಿ ರೀತಿಯಲ್ಲಿ ಮಾಡುವಂಥ ಒಂದು ಪ್ರಯತ್ನವನ್ನು ಮಾಡಲಾಗುತ್ತದೆ. ಇದರ ಬಗ್ಗೆ ವಿಶೇಷವಾದಂಥ ಒಂದು ಕಾರ್ಯಕ್ರಮವನ್ನು TV-9ರವರು ಮಾಡಿ ಜನರಲ್ಲಿ ಈ ಬಗ್ಗೆ ಜಾಗೃತಿಯನ್ನು ಮೂಡಿಸಿದ್ದಾರೆ. ಅವರೂ ಸಹ ಇದರ ಬಗ್ಗೆ ಕೈ ಜೋಡಿಸುತ್ತಿದ್ದಾರೆ. ಅದೇ ರೀತಿಯಾಗಿ NGO ಗಳೂ ಸಹ ಕೈಜೋಡಿಸಿದರೆ ಇನ್ನೂ ಹೆಚ್ಚು effective ಆಗಿ ಈ ಸಮಸ್ಯೆಯನ್ನು ಎದುರಿಸುವುದಕ್ಕೆ ಸಾಧ್ಯ ಇದೆ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎನ್.ಯೋಗೀಶ್ ಭಟ್ (ಉಪಾಧ್ಯಕ್ಷರು): ಮಾನ್ಯ ಅಧ್ಯಕ್ಷರೆ, ಸರ್ವೆ ಮಾಡುವ ಸಂದರ್ಭದಲ್ಲಿ ಒಂದು ಲ್ಯಾಪ್ಸ್ ಆಗಿದೆ. ಎಂಡೋಸಲ್ಫಾನ್ ಪೀಡಿತ ಕುಟುಂಬಗಳಲ್ಲಿನ ಹೆಣ್ಣು ಮಕ್ಕಳು ಮದುವೆ ಆಗಿ ಬೇರೆ ಕಡೆಗೆ ಹೋಗಿ ಅವರಿಗೆ ಹುಟ್ಟಿದಂಥ ಮಕ್ಕಳಲ್ಲಿ ಇಂಥ ಒಂದು ಕಾಯಿಲೆಯ ಗುಣಲಕ್ಷಣಗಳು ಕಂಡು ಬಂದ ಹಿನ್ನೆಲೆಯಲ್ಲಿ ಅವರ ಬಗ್ಗೆ ಯಾವುದೇ

ರೀತಿಯ ಸಮೀಕ್ಷೆ ಆಗಿಲ್ಲ. ಆದ್ದರಿಂದ, ಇದನ್ನೂ ಸಹ ಸಮೀಕ್ಷೆ ವ್ಯಾಪ್ತಿಯಲ್ಲಿ ತುರುವುದು ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸಂಪೂರ್ಣ ಅಧ್ಯಯನ ನಡೆಯುತ್ತಿದೆ. ಮಾನ್ಯ ಉಪಾಧ್ಯಕ್ಷರು ಹೇಳಿದಂಥ ಅಂಶ ಅದರಲ್ಲಿ ಒಳಗೊಂಡಿದೆ ಮತ್ತೆ ಇದರ ಬಗ್ಗೆ ಅಧ್ಯಯನ ಕೂಡ ಮಾಡುತ್ತಿದ್ದಾರೆ.

ಆರಾಧನಾ ಯೋಜನೆಯಡಿಯಲ್ಲಿ ಅನುದಾನ ಮಂಜೂರಾತಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 14 : (08)

ಶ್ರೀ ರುದ್ರೇಶಗೌಡ ವೈ.ಎನ್ (ಬೇಲೂರು)

ಅ) ಆರಾಧನಾ ಯೋಜನೆಯಡಿಯಲ್ಲಿ 2012–13 ನೇ ಸಾಲಿನಲ್ಲಿ ಮಂಜೂರಾದ ಅನುದಾನವೆಷ್ಟು; (ಕ್ಷೇತ್ರವಾರು ಮಾಹಿತಿ ನೀಡುವುದು)

ಆ) ಅನುದಾನ ಕೊರತೆಯಿಂದಾಗಿ ರಾಜ್ಯದಲ್ಲಿ ದೇವಸ್ಥಾನಗಳ ಅಭಿವೃದ್ಧಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ದೇವಸ್ಥಾನಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೋಟ್ಯಾ ಶ್ರೀನಿವಾಸ ಪೂಜಾರಿ (ಮುಜರಾಯಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಆರಾಧನಾ ಯೋಜನೆಯಡಿ 2012–13ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ 6,27,90,000/– ರೂ.ಗಳು (ದಿನಾಂಕ: 31–01–2013ರ ಅಂತ್ಯಕ್ಕೆ) ಕ್ಷೇತ್ರವಾರು ಬಿಡುಗಡೆ ಮಾಡಿರುವ ಅನುದಾನದ ವಿವರ ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ.